

‘ಇಂಡೋ–ಜರ್ಮನ್ ಆದ ಮೇಲಾದರೂ ಒಂಚೂರು ಚುರುಕಾಗಬೇಕಾಗಿತ್ತಲ್ಲವೆ?’ ಎನ್ನುತ್ತಾ ಶೂಮಾಕರ್ ಕೂಡ ನಕ್ಕರು. ಸಂಶೋಧಕ ತಮ್ಮ ಪುಸ್ತಕ ಓದಿದ್ದಾನೆಂದು ಅವರಿಗೆ ಹರ್ಷವೂ ಆಯಿತು.

‘ಇಂಡಿಯಾದ ಕರೆನ್ಸಿ ಯಾವುದು?’, ಶೂಮಾಕರ್ ಕೇಳಿದರು. ಲೋಹಿಯಾ ಅರೆ ಮನಸ್ಸಿನಿಂದ ‘ಗೋಲ್ಡ್ ಸ್ಟ್ಯಾಂಡರ್ಡ್’ ಎಂದರು. ಉದಾಹರಣೆಗೆ, ನೂರು ರೂಪಾಯಿಯ ನೋಟನ್ನು ಅಷ್ಟೇ ಬೆಲೆಬಾಳುವ ಚಿನ್ನದ ಭದ್ರತೆಯನ್ನಿಟ್ಟುಕೊಂಡು ಮುದ್ರಿಸುತ್ತಿದ್ದ ಪದ್ಧತಿಯನ್ನು ಗೋಲ್ಡ್ ಸ್ಟ್ಯಾಂಡರ್ಡ್ ಎನ್ನುತ್ತಿದ್ದರು; ಆದರೆ, 1931–32ರ ನಡುವೆ ಬ್ರಿಟಿಷ್ ಸರ್ಕಾರ ಅದನ್ನು ನಿಭಾಯಿಸಲಾಗದೆ ಗೋಲ್ಡ್ ಸ್ಟ್ಯಾಂಡರ್ಡ್ ಆಧಾರವನ್ನು ಕೈಬಿಟ್ಟಿತ್ತು. ಕೆಲವೇ ನಿಮಿಷಗಳಲ್ಲಿ ಲೋಹಿಯಾಗೆ ಉತ್ತರ ತಪ್ಪಾಗಿದೆಯೆಂದು ಗೊತ್ತಾಯಿತು.

‘ಉತ್ತರ ತಪ್ಪು ಹೇಳ್ತಾ ಇದ್ರೂ ನೀವು ನನ್ನ ಬೈಯಲಿಲ್ಲವಲ್ಲ?’ ಎಂದರು ಲೋಹಿಯಾ.

‘ನೀವೇ ಯೋಚನೆ ಮಾಡಲಿ ಅಂತ ಬಿಟ್ಟೆ. ಇದು ನಿಮಗೇ ಗೊತ್ತಿದೆ ಅಂತ ನನಗೆ ಗೊತ್ತಿತ್ತು’ ಎಂದು ಶೂಮಾಕರ್ ನಕ್ಕರು. ಮುಂದಿನ ಒಂದು ಗಂಟೆಯ ಕಾಲ ಚಿನ್ನದ ಗಣಿಗಳ ಬಗ್ಗೆ ಚರ್ಚೆ ನಡೆಯಿತು.

‘ದಕ್ಷಿಣ ಆಫ್ರಿಕಾ ಹಾಗೂ ಅಮೆರಿಕದ ಚಿನ್ನದ ಗಣಿಗಳ ನಡುವಣ ವ್ಯತ್ಯಾಸವೇನು?’ ಎಂದರು ಶೂಮಾಕರ್.

ಲೋಹಿಯಾಗೆ ಉತ್ತರ ಗೊತ್ತಿರಲಿಲ್ಲ; ಆದರೆ ಚಾರ್ಲಿ ಚಾಪ್ಲಿನ್‌ನ ‘ಗೋಲ್ಡ್ ರಶ್’ ಸಿನಿಮಾದ ಫೋಟೊ ನೋಡಿದ್ದು ನೆನಪಾಯಿತು! ‘ದಕ್ಷಿಣ ಆಫ್ರಿಕಾದಲ್ಲಿ ಯಂತ್ರಗಳ ಸಹಾಯದಿಂದ ಗಣಿಗಾರಿಕೆ ನಡೆಯುತ್ತದೆ; ಕ್ಯಾಲಿಫೋರ್ನಿಯಾದಲ್ಲಿ ಗ್ರಾಮೋದ್ಯೋಗದ ಮೂಲಕ ಗಣಿಗಾರಿಕೆ ನಡೆಯುತ್ತದೆ’ ಎಂದರು!

‘ದೊಡ್ಡ ಕೈಗಾರಿಕೋದ್ಯಮಿಗಳ ಹೆಸರು ಹೇಳಿ?’ ಎಂದರು ಶೂಮಾಕರ್. ಲೋಹಿಯಾಗೆ ಯಾವ ಸಿನಿಮಾವೂ ನೆನಪಾಗಲಿಲ್ಲ; ಹಾಗೇ ಉತ್ತರ ಕೂಡ!

ಮತ್ತೊಬ್ಬ ಪರೀಕ್ಷಕ ದೇಸ್ಸರ್, ಲೋಹಿಯಾ ಅವರನ್ನು ಕೇಳಿದರು: ‘ನೀವು ಹಿಂದೂವೋ ಮುಸಲ್ಮಾನರೋ?’

ಸಾಮಾನ್ಯವಾಗಿ ಇಂಥ ಪ್ರಶ್ನೆ ಬಂದಾಗ ‘ನನ್ನ ಪರಿಕಲ್ಪನೆಯ ಧರ್ಮಕ್ಕೂ ಈ ಧರ್ಮಗಳಿಗೂ ಸಂಬಂಧ ಇಲ್ಲ’ ಎಂದು ಲೋಹಿಯಾ ಉತ್ತರ ಕೊಡುತ್ತಿದ್ದರು. ಆದರೆ ಅವತ್ತು ‘ನಾನು ಹಿಂದೂ’ ಎಂದು ಉತ್ತರ ಕೊಟ್ಟರು.

‘ಮಹಾತ್ಮ ಎಂಬುದರ ಅರ್ಥವೇನು?’ ಎಂದರು ದೇಸ್ಸರ್.

‘ಮಹಾತ್ಮ’ ಎಂಬ ಪದದ ಅರ್ಥ ವಿವರಿಸುತ್ತಾ ಲೋಹಿಯಾ ಹೇಳಿದರು: ‘ಹಿಂದೂಗಳಲ್ಲಿ ಮಹಾತ್ಮರಿರುವಂತೆ ಮುಸ್ಲಿಮರಲ್ಲೂ ಮಹಾತ್ಮರಿದ್ದಾರೆ.’

‘ಭಾರತಕ್ಕೆ ಹೋಗಿ ಏನು ಮಾಡುತ್ತೀರಿ?’ ಎಂದರು ಮತ್ತೊಬ್ಬ ಪ್ರೊಫೆಸರ್.

‘ಪ್ರೊಫೆಸರ್ ಅಂತೂ ಆಗಲ್ಲ’ ಎಂದರು ಲೋಹಿಯಾ.

‘ಹಿಟ್ಲರ್ ಸರ್ವಾಧಿಕಾರದ ಕೆಟ್ಟ ದಿನಗಳು ಬರಲಿವೆ. ಆದಷ್ಟು ಬೇಗ ಜರ್ಮನಿಯಿಂದ ಹೊರಡಿ’ ಎಂದು ಶೂಮಾಕರ್ ಲೋಹಿಯಾರನ್ನು ಮತ್ತೆ ಎಚ್ಚರಿಸಿದರು.

ಜರ್ಮನಿಯ ವಾತಾವರಣ ಕೆಡುತ್ತಿರುವುದು ಲೋಹಿಯಾ ಅನುಭವಕ್ಕೂ ಬಂದಿತ್ತು. 1933ರ ಜನವರಿ 30ರಂದು ಹಿಟ್ಲರ್ ಅರ್ಧ ಅಧಿಕಾರ ಗಳಿಸಿದ್ದ; ಆಗ ಲೋಹಿಯಾ ತಮ್ಮ ಕಮ್ಯುನಿಸ್ಟ್ ಗೆಳೆಯರು ಕೂಡ ಸೋಷಲಿಸ್ಟ್ ಗೆಳೆಯರಂತೆಯೇ ಅಸಹಾಯಕರಾಗಿ ಹೆದರಿದ್ದನ್ನು ಕಂಡು ನೊಂದುಕೊಂಡಿದ್ದರು. ಜರ್ಮನಿಯಲ್ಲಿ ಹಬ್ಬಲಿದ್ದ ಭಯಾನಕ ಸರ್ವಾಧಿಕಾರದ ಸೂಚನೆಗಳು ಸ್ಪಷ್ಟವಾಗಿ ಕಾಣಲಾರಂಭಿಸಿದ್ದವು.

23 ಮಾರ್ಚ್ 1933, ಹಿಟ್ಲರ್‌ಗೆ ಪೂರ್ಣಾಧಿಕಾರ ಸಿಕ್ಕಿತು. ಅದು ಲೋಹಿಯಾ ಜನ್ಮ ದಿನ ಕೂಡ! ಪ್ರಾಯಶಃ ಅವತ್ತೇ ಲೋಹಿಯಾ ಇಂಡಿಯಾ ತಲುಪಿದ್ದರೆಂದು ಕಾಣುತ್ತದೆ.

ಅತ್ತ ಜರ್ಮನಿಯಲ್ಲಿ ಹಿಟ್ಲರ್ ಅಧಿಕಾರಕ್ಕೆ ಬಂದ ನಂತರದ ಮೂರು ತಿಂಗಳಲ್ಲಿ ನಾಝಿ ಪಕ್ಷವೊಂದನ್ನು ಬಿಟ್ಟು ಉಳಿದ ವಿರೋಧ ಪಕ್ಷಗಳನ್ನು, ಸಂಘಟನೆಗಳನ್ನು ದಮನ ಮಾಡಲಾಯಿತು.